ವಿಸ್ಕಿ, ವೊಡ್ಕಾ?...' ಎಂದು ಕೇಳಿದ.

'ಪರ್ವಾಗಿಲ್ಲ ಮೋಹನ್, ಅದೇನೂ ಬೇಡ.'

'ಪ್ಲೀಸ್ ಕಾಲ್ ಮಿ ಮೋ. ಅದೇ ನನ್ನ ನಿಜವಾದ ಹೆಸರು ಈಗ. ಕಮಾನ್, ಏನು ತಗೋತೀಯಾ? ಲೆಟ್ ಅಸ್ ಹ್ಯಾವ್ ಸಂಥಿಂಗ್ ಲೈಟ್‌ಲೀ. ನಾವಿಬ್ಬರೂ ಮತ್ತೆ ಸಿಕ್ಕ ಖುಷಿಗೆ.'

ನಾನು 'ಇಂಥ ಹೋಟೆಲಿನಲ್ಲಿ, ಅದೂ ಡ್ರಿಂಕ್ಸ್ ತೆಗೆದುಕೊಂಡರೆ ಅದೆಷ್ಟು ತುಟ್ಟಿಯಿದ್ದೀತೋ. ಅದನ್ನು ನಾನೇ ಕೊಡಬೇಕಾಗಿ ಬಂದರೆ, ಅಥ್ವಾ ಇಬ್ಬರೂ ಹಂಚಿಕೊಳ್ಳುವ ಪ್ರಮೇಯ ಬಂದರೆ...' ಎಂದು ಮನದಲ್ಲಿ ಚಿಂತಿಸುತ್ತಿರುವುದನ್ನು ಅರಿತಂತೆ ಆತ 'ಡೋಂಟ್ ವರಿ. ನೀನು ನನ್ನ ಕ್ಲಾಯಿಂಟ್ ಈಗ. ನಿನ್ನ ಈ ರಾತ್ರಿಯ ಖರ್ಚು ವೆಚ್ಚಗಳನ್ನೆಲ್ಲ ನನ್ನ ಕಂಪೆನಿ ನೋಡಿಕೊಳ್ಳುತ್ತದೆ' ಎಂದು ನಾಟಕೀಯವಾಗಿ ಹೇಳಿ 'ವದ್ಧಾss...' ಎನ್ನುತ್ತ ಮಾಮೂಲಿ ಶೈಲಿಯಲ್ಲಿ ಗಹಗಹಿಸಿ ನಕ್ಕ.

ನಾವಿಬ್ಬರೂ ವಿಸ್ಕಿ ಹೀರುತ್ತ, ಅದು ಇದು ಮಾತನಾಡುತ್ತ ಕುಳಿತಿರುವಾಗ ಪಕ್ಕದಲ್ಲೆಲ್ಲೋ ಹಿಂದಿ ಸಿನಿಮಾ ಹಾಡುಗಳು ಕೇಳಿಸುತ್ತಿತ್ತು. ಅದು ಆ ಮುಚ್ಚಿದ ಬಾಗಿಲ ಹಿಂದಿನಿಂದಲೇ ಬರುತ್ತಿರಬೇಕು ಎನ್ನುವ ಊಹೆಯಿಂದ ನಾನು ಅತ್ತ ಕುತೂಹಲದ ದೃಷ್ಟಿ ಹಾಯಿಸುತ್ತಿರುವಂತಲೇ; 'ಹವ್ ಅಬೌಟ್ ಸಮ್ ಸೆಕ್ಸಿ ಡಾನ್ಸ್?... ಯು ಲೈಕ್ ಇಟ್?... ಕಮಾನ್ ಲೆಟ್ಸ್ ಗೊ...' ಅನ್ನುತ್ತ ನನ್ನ ಭುಜ ತಟ್ಟಿ ನನ್ನ ಅನುಮತಿಗೂ ಕಾಯದೇ ಗ್ಲಾಸನ್ನು ಕೈಯ್ಯಲ್ಲೇ ಹಿಡಿದು ಹೊರಟೇ ಬಿಟ್ಟ ಮೋ. ಪ್ರಥಮ ಬಾರಿಗೆ ಹೊಸ ವಾತಾವರಣಕ್ಕೆ ಒಡ್ಡಿಕೊಂಡು ಮುದಗೊಳ್ಳುತ್ತಲೇ ಮುಜುಗರಗೊಳ್ಳುತ್ತಿದ್ದ ನನ್ನ ಮನಸ್ಸು 'ದುಡ್ಡು ನಾನೇನೂ ಕೊಡಬೇಕಾಗಿಲ್ಲ' ಎಂಬುದು ಕನ್‌ಫರ್ಮ್ ಆದಾಗಿನಿಂದ ತಿಳಿಯಾಗಿತ್ತು. ಮುಚ್ಚಿದ ಬಾಗಿಲನ್ನು ಬಲವಂತವಾಗಿ ನೂಕಿ ಸಂಗೀತ ಕೇಳುತ್ತಿದ್ದ ಕೋಣೆಯ ಒಳ ಹೋದರೆ ಅದು ಬೇರೆಯದೇ ಪ್ರಪಂಚ! ಮಬ್ಬುಗತ್ತಲ ದೊಡ್ಡ ಹಾಲ್ ನಡುವೆ ವಿವಿಧ ಬಣ್ಣದ ಬೆಳಕಿಂದ ಮಿಂಚುತ್ತಿರುವ ಒಂದು ಸ್ಟೇಜು. ಅದರ ಸುತ್ತಲೂ ಅಳವಡಿಸಿಟ್ಟ ಸೋಫಾ, ಟೀಪಾಯಿಗಳು. ಇಡೀ ಹಾಲು ತುಂಬಿರದಿದ್ದರೂ ಸಾಕಷ್ಟು ಜನರಿದ್ದರು ಅಲ್ಲಿ. ಅತೀ ಗೌಪ್ಯವೆನ್ನಿಸದಿದ್ದರೂ ಯಾವೊದೋ ಒಂದು ಖಾಸಗೀತನದ ವಾತಾವರಣ ಎದ್ದು ಕಾಣುತ್ತಿತ್ತು. ಸ್ಟೇಜಿನ ಮೇಲೆ ತುಂಡುಡುಗೆ ತೊಟ್ಟ ಏಳೆಂಟು ಲಲನೆಯರು ಸಂಗೀತಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ಮಾದಕವಾಗಿ ಕುಣಿಯುತ್ತಿದ್ದರು. ನಾವು ಸ್ಟೇಜಿಗೆ ಹತ್ತಿರವೇ ಇರುವ ಸೋಫಾದಲ್ಲಿ ಹೋಗಿ ಕುಳಿತೆವು. ಗಂಟಲು ಹಾಗೂ ಕಣ್ಣು ತಂಪು ಮಾಡಿಕೊಳ್ಳುತ್ತ ಲೋಕಾಭಿರಾಮಕ್ಕಿಳಿದೆವು.

'ನನಗೆ ಒಬ್ಬಳೇ ಹೆಂಡತಿ ಹಾಗೂ ಒಬ್ಬಳೇ ಮಗಳು, ಅವಳಿಗೀಗ ಏಳು ವರ್ಷ' ನಾನಂದೆ. ಮೋ ತನ್ನ ಅಸಂಖ್ಯ ಸಖಿಯರ ಬಗ್ಗೆ ಹೇಳಿದ. ತನ್ನ ಮೊಬೈಲಿನಲ್ಲಿ ಯಾರದೋ ಫೋಟೊ ತೋರಿಸುತ್ತಾ 'ಇವಳು ಗೊತ್ತಾ?' ಎಂದ. ಹಿಂದೀ ಸಿನಿಮಾದಲ್ಲಿ ನಟಿಸುವವಳು, ಅಷ್ಟೇನೂ ಪ್ರಖ್ಯಾತಳಲ್ಲದಿದ್ದರೂ, ನನಗೆ ತುಂಬಾ ಇಷ್ಟವಾಗುತ್ತಾಳಾದ್ದರಿಂದ ಗೊತ್ತಿದ್ದಾಳೆ. 'ಇವಳು ನನ್ನ ಹಿಂದೆ ಬಿದ್ದು ಬಿಟ್ಟಿದ್ದಳು ಮಾರಾಯ, ಬಿಡಿಸಿಕೊಳ್ಳುವುದರಲ್ಲಿ ಸಾಕುಬೇಕಾಯಿತು. ಹಾಸಿಗೆ ಹಂಚಿಕೊಂಡವರನ್ನೆಲ್ಲಾ ಹೆಂಡತಿ ಮಾಡಿಕೊಂಡರೆ... ಅಷ್ಟೇ' ಅನ್ನುತ್ತ ಜೋರಾಗಿ ನಕ್ಕ. ನನಗೆ ಅವನ ಮಾತು ನಿಜವಿರಲಿಕ್ಕಿಲ್ಲ ಎಂದೆನಿಸಿದರೂ ಹೊಟ್ಟೆಕಿಚ್ಚಾಯಿತು. 'ಸದ್ಯಕ್ಕೆ ಚಲಿಂಡಾ ಎನ್ನುವ ಥೈ ಮಾಡೆಲ್ ಒಬ್ಬಳೊಡನೆ ಇದ್ದೇನೆ' ಎಂದ. 'ಓ, ಲವ್ವಾ?' ಎಂದು ನಾನು ಕೇಳಿದ್ದೇ ತಪ್ಪಾಯಿತೇನೋ.'ಈ ಲವ್ವು ಗಿವ್ವು ಅನ್ನೋದೆಲ್ಲಾ ಭಾರತೀಯರ ಇಮೋಷನಲ್ ಭ್ರಮೆ. ಅದು